**PW-1**

ಸಾಕ್ಷಿದಾರನು ದಿನಾಂಕಃ 04-07-2023 ರಂದು ಕ್ರಮವಾಗಿ ಪ್ರಮಾಣ ವಚನ ಮಾಡಿದನು

ಪಾಟೀ ಸವಾಲುಃ ಶ್ರೀ ಸಿಆರ್.ಕೆ ವಕೀಲರಿಂದಃ

ಚಂದ್ರಶೇಖರ ನನಗೆ ಗೊತ್ತು. ಈ ಕೇಸನ್ನು ಹಾಕಿದ ನಂತರದಿಂದ ನನಗೆ ಪರಿಚಿತ. ಈ ಕೇಸು ದಾಖಲಿಸುವ ಪೂರ್ವದಲ್ಲಿ ಆತನು ನನಗೆ ಪರಿಚಿತನಾಗಿರಲಿಲ್ಲ. ನನ್ನ ತಂದೆಯ ತಂದೆಹೆಸ ರು ದೊಡ್ಡಪ್ಪಯ್ಯ. ದೊಡ್ಡಪ್ಪಯ್ಯಣ್ಣನಿಗೆ ನನ್ನ ತಂದೆ ಮತ್ತು ಭದ್ರಪ್ಪ ಎನ್ನುವವರು ಇಬ್ಬರು ಗಂಡು ಮಕ್ಕಳು ಎಂದರೆ ಸರಿ. ದೊಡ್ಡಪ್ಪಯ್ಯಣ್ಣ ತೀರಿಕೊಂಡು ಎಷ್ಟು ವರ್ಷವಾಯಿತೆಂದು ನನಗೆ ಗೊತ್ತಿಲ್ಲ. ಭದ್ರಪ್ಪ ಮತ್ತು ಈರಪ್ಪ ಭಾಗ ಮಾಡಿಕೊಂಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ, ಸಾಕ್ಷಿ ಸ್ವತಃ ಒಟ್ಟು ಕುಟುಂಬದಲ್ಲಿದ್ದರು ಎನ್ನುತ್ತಾರೆ.

ಭದ್ರಪ್ಪನಿಗೆ ಇಬ್ಬರು ಹೆಂಡತಿಯರು ಅವರೆಂದರೆ, ಗೌರಮ್ಮ ಮತ್ತು ಕಮಲಮ್ಮ. ಅದಕ್ಕಿಂತ ಪೂರ್ವದಲ್ಲಿ ಭದ್ರಪ್ಪನು ಬೇರೆ ಯಾರನ್ನೂ ಮದುವೆಯಾಗಿಲ್ಲ. 2002 ರಲ್ಲಿ ಕೇಸನ್ನು ಹಾಕಿದ ನಂತರ ನಾನು ಪಾರ್ವತಮ್ಮನನ್ನು ಮೊದಲಿಗೆ ನೋಡಿದೆ. ಅದಕ್ಕಿಂತ ಪೂರ್ವದಲ್ಲಿ ಪಾರ್ವತಮ್ಮ ಯಾರು, ಏನು ಎಂದು ನಾನು ತಿಳಿದುಕೊಂಡಿರಲಿಲ್ಲ. ಈ ಹಿಂದೆ ಸಲ್ಲಿಸಿದ ದಾಖಲೆಗಳು ಏನೇನು ಎಂದು ತಿಳಿದುಕೊಂಡಿದ್ದೀಯ ಎಂದರೆ ಸಾಕ್ಷಿಯು ಹಿಂದಿನ ಕೇಸಿಗೆ ಸಂಬಂಧಪಟ್ಟ ದಾಖಲೆಗಳು ಎನ್ನುತ್ತಾರೆ.

**PW-1**

ನಿಪಿ-1 ಪ್ರಮಾಣಪತ್ರ ತಾಲ್ಲೂಕು ಕಚೇರಿಯವರು ನೀಡಿದ್ದಲ್ಲ ಅದು ನನ್ನ ಸ್ವಂತದಿಂದ ತಯಾರಿಸಿ ಹಾಕಿದ್ದು ಎಂದರೆ ನನಗೆ ಗೊತ್ತಿಲ್ಲ. ಅದು ತಹಸೀಲ್ದಾರ್ ರವರಿಂದ ಪಡೆದುಕೊಂಡಿದ್ದಲ್ಲ, ನೋಟರಿಯವರಿಂದ ಮಾಡಿಸಿದ್ದಾಗಿದೆ ಎಂದರೆ ಸರಿ. ನಿಪಿ-2 ನ್ನು ನಾನೇ ದಾಖಲಿಸಿದ್ದು " ರಘುಪತಿಹಳ್ಳಿಯಲ್ಲಿ ವಾಸವಿರುವ ಲೇಟ್ ಭದ್ರಪ್ಪನವರ ಧರ್ಮಪತ್ನಿ ಸುಮಾರು 75 ವರ್ಷ ವಯಸ್ಸುಳ್ಳ ಪಾರ್ವತಮ್ಮ ಆದ ನಾನು " ಎಂದು ನಾನು ಸುಳ್ಳು ವಿಲ್ ನಾಮೆ ಬರೆಸಿ ಹಾಕಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನಮ್ಮ ಆಸ್ತಿ ನುಂಗಿಹಾಕುವುದಕ್ಕೆ ನಿಪಿ-2 ರಂತೆ ವಿಲ್ ಪತ್ರ ಮಾಡಿದ್ದಾರೆ. ನಿಪಿ-3 ಕ್ರಯಪತ್ರದ ಪ್ರಕಾರ ಪತ್ರವನ್ನು ಆಸ್ತಿಯನ್ನು ಮಾರಾಟ ಮಾಡಿರುತ್ತಾನೆ. " ದೊಡ್ಡಪ್ಪನವರ ಮಗನಾದ ಸುಮಾರು 55 ವರ್ಷವುಳ್ಳ ಭದ್ರಪ್ಪ ಹಾಗೂ ಅಲ್ಪವಹಿ ಸಾಕುಮಗನಾದ ಚಂದ್ರಶೇಖರ್ ಸೇರಿ ಮಾರಾಟ ಮಾಡಿದ್ದಾರೆಂದು ನಿಪಿ-3 ರಲ್ಲಿ ಕಂಡು ಬರುತ್ತದೆ ಎಂದರೆ ಸಾಕ್ಷಿ ಅದು ಚಂದ್ರಶೇಖರಯ್ಯ ಅಲ್ಲ ಚಂದ್ರಯ್ಯ ಎನ್ನುತ್ತಾರೆ. ಸದರಿ ನಿಪಿ-3 ರಲ್ಲಿ ತಿಳಿಸಿರುವ ಚಂದ್ರಯ್ಯ ಯಾರು ಎಂದು ನಾನು ತಿಳಿದುಕೊಳ್ಳಲು ಹೋಗಿಲ್ಲ ಯಾಕೆಂದರೆ ಅದರಲ್ಲಿ ಪೂರ್ತಿ ವಿಳಾಸ ಇಲ್ಲ ಎನ್ನುತ್ತಾರೆ. ಭದ್ರಪ್ಪ ತನಗೆ ಬಂದ ಆಸ್ತಿಗಳನ್ನೆಲ್ಲಾ ತನ್ನ ತಂಗಿ ಈರಮ್ಮ ಮತ್ತು ಭಾವ ನಂಜುಂಡಪ್ಪನವರಿಗೆ ದಾನಪತ್ರದ ಮೂಲಕ ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ದಾನಪತ್ರವು ಮಾಡಿರಬಹುದು, ಯಾಕೆ ಮಾಡಿದ್ದಾರೆ ಎಂದು ಗೊತ್ತಿಲ್ಲ ಎನ್ನುತ್ತಾರೆ. ಸದರಿ ದಾನಪತ್ರದ ಪ್ರಕಾರ ಈರಮ್ಮ ಮತ್ತು ನಂಜುಂಡಪ್ಪನವರು ಸದರಿ ಆಸ್ತಿಯನ್ನು ಪಾರ್ವತಮ್ಮನಿಗೆ ದಾನಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಹೌದು, ಅವರಿಗೆ ಜಂಟೀಯಾಗಿ ಮಾಡಿಕೊಟ್ಟಿದ್ದಾರೆ ಎನ್ನುತ್ತಾರೆ. ನಂತರ ಪಾರ್ವತಮ್ಮನು ವೈಮನಸ್ಸಿನಿಂದಾಗಿ ತನ್ನ ಗಂಡನ ಮೇಲೆ ಜೀವನಾಂಶ ಕೇಳಿ ಅಲ್ಲಿ ದಾವೆಯನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ಜೀವನಾಂಶ ಪ್ರಕರಣದಲ್ಲಿ ಪಾರ್ವತಮ್ಮಳಿಗೆ ಭದ್ರಪ್ಪನು ತಿಂಗಳಿಗೆ ರೂ.500/- ಜೀವನಾಂಶ ಕೊಡಬೇಕೆಂದು ಆದೇಶವಾಗಿತ್ತು ಎಂದರೆ ಹೌದು, ಆದರೆ ಆಗ ನನಗೆ ಓಡಾಲು ಆಗದೇ ಇರುವುದರಿಂದ ಆದೇಶ ಮಾಡಿಬಿಟ್ಟಿದ್ದರು, ಆದರೆ ನಾವು ಕೇಸು ಹಾಕಿ ಪ್ರಶ್ನಿಸಿದ್ದೇವೆ ಎನ್ನುತ್ತಾರೆ. ಪಾರ್ವತಮ್ಮನ ಪರವಾಗಿ ಆಗಿದ್ದ ಜೀವನಾಂಶ ಆದೇಶ ವಜವಾಗಿದ್ದು ಅಥವಾ ಅದನ್ನು ಪ್ರಶ್ನಿಸಿದ್ದ ಬಗ್ಗೆದಾಖಲಾತಿಯನ್ನು ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿಯು ಇದ್ದ ದಾಖಲೆಗಳನ್ನೆಲ್ಲಾ ಹಾಜರು ಪಡಿಸಿದ್ದೇವೆ ಎನ್ನುತ್ತಾರೆ.

**PW-1**

ಅಸಲು ದಾವಾ 32/2002 ಕೇಸನ್ನು ಜೀವನಾಂಶ ಆದೇಶವಾದ ನಂತರವೇ ಪಾರ್ವತಮ್ಮನು ತನ್ನ ಗಂಡ ಹಾಗೂ ನನ್ನ ತಂದೆಯ ಮೇಲೆ ದಾಖಲಿಸಿದ್ದರು ಎಂದರೆ ಸಾಕ್ಷಿಯು ಮೊದಲೇ ಹಾಕಿದ್ದರು ಎನ್ನುತ್ತಾರೆ. ಸದರಿ ಪ್ರಕರಣದಲ್ಲಿ ಪಾರ್ವತಮ್ಮನು ತನಗೆ ದಾನಪತ್ರದ ಮೂಲಕ ಬಂದ ಆಸ್ತಿಗಳಿಗಷ್ಟೇ ಸೀಮಿತವಾಗಿರಿಸಿ ಕೇಸು ಹಾಕಿದ್ದಳು ಎಂದರೆ ಸರಿ. ಅದನ್ನು ಹೊರತು ಪಡಿಸಿ ಉಳಿದ ಅರ್ಧ ಭಾಗದ ಆಸ್ತಿ ಈಗಲು ನನ್ನ ತಂದೆ ಈರಪ್ಪನ ಹೆಸರಿಗೆ ಬರುತ್ತಾ ಇವೆ ಎನ್ನುವುದು ನಿಜ. ನಮ್ಮ ತಂದೆ ತೀರಿಕೊಂಡ ನಂತರದಿಂದ ಕೆಲವು ಆಸ್ತಿಗಳನ್ನು ನನ್ನ ಹೆಸರಿಗೆ, ನನ್ನ ತಾಯಿ, ಸಹೋದರರ ಹೆಸರಿಗೆ ಮಾಡಿಸಿಕೊಂಡಿದ್ದೇವೆ ಎಂದರೆ ಸರಿ.

ಸರ್ವೇ ನಂಬರ್ 17/1 ರ 1 ಎಕರೆ 21 ಗುಂಟೆ ನನ್ನ ತಮ್ಮ ಚಿಕ್ಕಪ್ಪಯ್ಯನ ಹೆಸರಿಗೆ ಬರುತ್ತಿದೆಎನ್ನುವುದು ಸರಿ. ಮೊದಲು ಸದರಿ ಸ್ವತ್ತು ನನ್ನ ತಂದೆಯ ಹೆಸರಿಗೆ ಬರುತ್ತಿದ್ದು ನನ್ನ ತಂದೆ ತೀರಿಕೊಂಡ ನಂತರದಿಂದ ನನ್ನ ತಮ್ಮನ ಹೆಸರಿಗೆ ಬರುತ್ತಿದೆ ಎಂದರೆ ಸರಿ, ಸರ್ವೇ ನಂಬರ್ 18/3-2 ಎ ರಲ್ಲಿ 18 ಗುಂಟೆ ಸ್ವತ್ತು ನನ್ನ ತಮ್ಮನಾದ ಸಿದ್ದೇಶ್ವರ ಈರೇಗೌಡನ ಹೆಸರಿನಲ್ಲಿ ಬರುತ್ತಿದೆ ಎಂದರೆ ಸರಿ. ಅದೇ ರೀತಿ ಸರ್ವೇ ನಂಬರ್ 3/2-ಸಿ 1 ಎಕರೆ 19 ಗುಂಟೆ ಸಿದ್ದೇಶ್ವರ ಈರೇಗೌಡನ ಹೆಸರಿಗೆ ಬರುತ್ತಿದೆ ಎಂದರೆ ಸರಿ. ಸರ್ವೇ ನಂಬರ್ 13/1 ರ 36 ಗುಂಟೆ ಸ್ವತ್ತು ನನ್ನ ತಾಯಿ ಪುಟ್ಟಮ್ಮನ ಹೆಸರಿಗೆ ಬರುತ್ತಿದೆ ಎಂದರೆ ಸರಿ. ಸರ್ವೇ ನಂಬರ್ 52/1 ರ 14 ಗುಂಟೆ ಸಿದ್ದೇಶ್ವರ ಹೆಸರಿಗೆ ಬರುತ್ತಿದೆ ಎಂದರೆ ಸರಿ. ಸರ್ವೇ ನಂಬರ್ 23/1 ರಲ್ಲಿ 3 ಎಕರೆ 8 ಗುಂಟೆ ಖಾತೆ ನನ್ನ ಹೆಸರಿಗೆ ಆಗಿದೆ ಎನ್ನುವುದು ಸರಿ. ಸರ್ವೇ ನಂಬರ್ 23/2 ರ ಉಳಿದ 3 ಎಕರೆ 8 ಗುಂಟೆ ಭದ್ರಪ್ಪನ ಹೆಸರಿಗೆ ಹೋಗಿದೆ ಎಂದರೆ ಸರಿ.

ಅಸಲು ದಾವೆ 32/2002 ರ ತೀರ್ಪಿನ ಪ್ರತಿಯನ್ನು ಹಾಜರು ಪಡಿಸಿ ನನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿ. ಅಸಲು ದಾವಾ 32/2002 ಮತ್ತು ಅಸಲು ದಾವಾ 154/2002 ರಲ್ಲಿ ಚಾಲ್ತಿ ಇರುವಾಗ ಪಾರ್ವತಮ್ಮ ತೀರಿಕೊಂಡಿದ್ದರಿಂದಲೇ ಆ ಕೇಸುಗಳು ವಜಾವಾಗಿದ್ದರಿಂದಲೇ ನಮ್ಮ ಪರ ಯಾವುದೇ ಆದೇಶವಾಗಿಲ್ಲ ಎಂದರೆ ಸರಿಯಲ್ಲ, ಪಾರ್ವತಮ್ಮಳು ಚಂದ್ರಶೇಖರನು ತನ್ನ ಕಾನೂನುಬದ್ಧ ವಾರಸುದಾರನಾಗಿದ್ದರಿಂದಲೇ ಆತನ ಹೆಸರಿಗೆ ವಿಲ್ ಮಾಡಿಕೊಟ್ಟಿರುವುದು ಕಾನೂನು ಪ್ರಕಾರವಾಗಿದೆ ಎಂದರೆ ಸರಿಯಲ್ಲ,

**PW-1**

ಪಾರ್ವತಮ್ಮಳು ಭದ್ರಪ್ಪನ ಕಾನೂನು ಪ್ರಕಾರವಾಗಿ ಹೆಂಡತಿಯಾಗಿರುವುದರಿಂದಲೇ ಆಕೆ ವಿಲ್ ನಾಮೆಯನ್ನು ಎದುರುದಾರರ ಹೆಸರಿಗೆ ಬರೆದುಕೊಟ್ಟಿರುವುದು ಸರಿಯಾಗಿದೆ ಎಂದರೆ ಸಾಕ್ಷಿಯು ಪಾರ್ವತಮ್ಮ ಭದ್ರಪ್ಪನ ಕಾನೂನು ಪ್ರಕಾರವಾದ ಹೆಂಡತಿಯೇ ಅಲ್ಲ ಎನ್ನುತ್ತಾರೆ. ನಾನು ನನ್ನ ತಂದೆ ಆಸ್ತಿಗಳನ್ನು ಈ ಪ್ರಕರಣದಲ್ಲಿ ಒಳಗೂಂಡ ಆಸ್ತಿಗಳನ್ನು ಹೊಡೆದುಕೊಳ್ಳುವ ದೃಷ್ಟಿಯಿಂದಲೇ ನ್ಯಾಯಾಲಯಕ್ಕೆ ತಪ್ಪು ಮಾಹಿತಿ ಕೊಟ್ಟು ರೆವೆನ್ಯೂ ಅಧಿಕಾರಿಗಳೊಂದಿಗೆ ಶಾಮೀಲಾಗಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಈ ಕೇಸಿನ ಅರ್ಜಿಯಲ್ಲಿ ಒಳಗೊಂಡ ಆಸ್ತಿಗಳಿಗೂ ನನಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಕೂಡ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಇಲ್ಲಿ ಹಾಜರು ಪಡಿಸಿರುವಂತಹ ಯಾವುದೇ ದಾಖಲಾತಿಗಳಿಗೂ ಹಾಗೂ ಈ ಪ್ರಕಣದಲ್ಲಿ ಒಳಗೊಂಡ ಆಸ್ತಿಗಳಿಗೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ  ಏನು ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಯಿತು)

**ಓ ಹೇ ಕೇ ಸ ಇ**

ಸಹಿ/-

(ಶುಕ್ಲಾಕ್ಷ ಪಾಲನ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೋಲಾರ.